XXVIII. ಕೆಳಗೆ ನಮೂದಿಸುವ ತಾಲ್ಲೂಕು ಬೋರ್ಡಿನವರ ಪ್ರೊಸೀಡಿಂಗ್ಸುಗಳನ್ನು ರಿಕಾರ್ಡು ಮಾಡಲಾಯಿತು.

(1) 27—2—09ನೆ ಮಂಡ್ಯದ ತಾಲ್ಲೂಕು ಪ್ರೊಸೀಡಿಂಗ್ಸು.
(2) 6—2—09ನೆ ಫ್ರೆಂಚ್‌ರಾಕ್ಸ್ ತಾಲ್ಲೂಕು ಪ್ರೊಸೀಡಿಂಗ್ಸು.
(3) 20—1—09ನೆ ನರಶೀಪುರ ತಾಲ್ಲೂಕು ಪ್ರೊಸೀಡಿಂಗ್ಸು.
(4) 10—2—09 }
　　10—4—09 } ನೆ ಮೈಸೂರು ತಾಲ್ಲೂಕು ಪ್ರೊಸೀಡಿಂಗ್ಸು.
(5) 19—3—09ನೆ ಕೃಷ್ಣರಾಜಪೇಟೆ ತಾಲ್ಲೂಕು ಪ್ರೊಸೀಡಿಂಗ್ಸು.
(6) 21—1—09 }
　　25—3—09 } ನೆ ನಂಜನಗೂಡು ತಾಲ್ಲೂಕು ಪ್ರೊಸೀಡಿಂಗ್ಸು.
(7) 20—1—09ನೆ ನಾಗಮಂಗಲ ತಾಲ್ಲೂಕು ಪ್ರೊಸೀಡಿಂಗ್ಸು.
(8) 30—4—09ನೆ ಹುಣಸೂರು ತಾಲ್ಲೂಕು ಪ್ರೊಸೀಡಿಂಗ್ಸು.

XXIX. ಪ್ರೆಸಿಡೆಂಟರವರಿಂದ 1909ನೆ ಇಸವಿ ಮೇ 28ರ ವರಿಗೆ ಮಂಜೂರು ಮಾಡಿದ 500 ರೂಪಾಯಿ ಮತ್ತು ಅದಕ್ಕೆ ಕಮ್ಮಿಯಾಗಿರುವ ಅಂದಾಜಗಳ ಕೆಲಸಗಳನ್ನು ಒಡಂಬಡಿಕೆ ಮಾಡಲಾಯಿತು.

XXX. 1909ನೆ ಇಸವಿ ದಸರಾ ರೆಪ್ರೆಸೆನ್‌ಟೇಟಿವ್ ಸಮಾಜಕ್ಕೆ ಚುನಾಯಿಸಬೇಕಾದ ಇಬ್ಬರು ಮೆಂಬರುಗಳನ್ನು ಮುಂದಿನ ಮೀಟಂಗಿನಲ್ಲಿ ಚರ್ಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XXXI. 1909ನೆ ಇಸವಿ ಆಗಸ್ಟು 21ನೆ ಶನಿವಾರ ಮಧ್ಯಾಹ್ನ 2 ಘಂಟೆಗೆ ಬರುವ ಮೀಟಂಗನ್ನು ನೆರಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 26ನೆ ಜೂನ್ 1909.

1. ಕಂದಾಯದ ಬಾಕೀದಾರನಾದ ಹಂದಿನಕೆರೆ ಗ್ರಾಮದ ವೆಂಕಟರಮಣಭಟ್ಟ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಹಾಸನ ಡಿಸ್ಟ್ರಿಕ್ಟು ಹಾಸನ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಆಗಸ್ಟು 23ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು ಪ್ರತಿ ಸಾಲಿನಲ್ಲೂ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 959 + 140—5—9 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು-ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ; ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾ

ಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ.						ಅಂದಾಜಾ ಕಿಮ್ಮತ್ತು.	ಸರಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
				ಕಟ್ಟಡಗಳು.		ಜಮೀನು.						
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.			
								ಎ. ಗು.	ರೂ. ಆ.		ರೂ.	ರೂ. ಆ. ಪೈ.
ಹಾಸನ	ಹಾಸನದ ಕಸಬಾ	ಜೋಡಿ ಹಂದಿನಕೆರೆ	ವೆಂಕಟನಾರಣಭಟ್ಟ ವಗೈರೆ		...	ಪೂರಾ ಗ್ರಾಮ	ಖರಾಬ್ ...	1,194 4	18 12	...	959	1,501 9 6 ಮತ್ತು ನೋಟಸ್ ಫೀ ಮತ್ತು ಬಡ್ಡಿ ಸಹ.
							ಖುಷ್ಕಿ ...	1,037 32	926 4			
							ತರಿ ...	311 9	1,105 12			
							ಬಾಗಾಯಿತು	43 6	195 0			
							ಜಮ್ಲಾ ...	2,586 11	2,245 12			

ಈ ಹರಾಜನ್ನು ಹಾಸನ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರವರು ಯಾ ಡೆಪ್ಯುಟಿ ಕಮಿಷ್ನರವರಿಂದ ನೇಮಕವಾಗುವ ಇತರ ಆಫೀಸರು ನಡಿಸುತ್ತಾರೆ.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1908—09ನೆ ಇಸವಿ ಮಿ॥ ನಂಬರ್ 802.

ಬೆಂಗಳೂರು ಬಳ್ಳಾಪುರದಪೇಟೆಲಿದ್ದು ಮೃತಪಟ್ಟ ಸುಬ್ಬರಾಯಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಳ್ಳಾಪುರದಪೇಟೆ ಡೋರ್ 26ನೆ ನಂಬರ ಮನೇಲಿರುವ ಸುಬ್ಬರಾಯಪ್ಪನ ಮಗ ಮುನಿಮುಲ್ಲಪ್ಪ, ಮೈನರ್, ಗಾರ್ಡಿಯನ್ ಅಮ್ಮೈಯಮ್ಮ ಉರಫ್ ಮುನಿಯಮ್ಮ ಮೃತಪಟ್ಟ ಸದರೀ ಸುಬ್ಬರಾಯಪ್ಪನಿಗೆ ಮುಖ್ಯ ವಾರಸದಾರರಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 645—9—2 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮೈಯಮ್ಮ ಉರಫ್ ಮುನಿಯಮ್ಮನ ಅರ್ಜಿಯನ್ನು ಸರ್ 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ನಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಜೂನ್ 20ನೆ ತಾರೀಖಿನಲ್ಲಿ ಕೋರ್ಟ್ ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

1908—09ನೆ ಇಸವಿ ಮಿ॥ ನಂಬರ್ 884.

ಕ್ಲೋಸ್‌ಪೇಟೆ ತಾಲ್ಲೂಕು ಬಿಡದೀಲಿ ಮೃತಪಟ್ಟ ಚನ್ನಮಲ್ಲಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕ್ಲೋಸ್‌ಪೇಟೆ ತಾಲ್ಲೂಕು ಬಾನಂದೂರುನಲ್ಲಿರುವ ಚೆನ್ನಮಲ್ಲಯ್ಯನ ಹೆಂಡತಿ ರುದ್ರಮ್ಮನು ಮೃತಪಟ್ಟ ಸದರೀ ಚನ್ನಮಲ್ಲಯ್ಯನಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬಾನಂದೂರು ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಚನ್ನಮಲ್ಲಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 299—8—11 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರ ದರಖಾಸ್ತುದಾರರಾದ ರುದ್ರಮ್ಮನ ಅರ್ಜಿಯನ್ನು ಸರ್ 1909ನೆ ಇಸವಿ ಜುಲೈ ತಿಂಗಳು 0ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಮಲ್ಲಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಜೂನ್ ತಿಂಗಳು 23ನೆ ತಾರೀಖಿನಲ್ಲಿ ಕೋರ್ಟ್ ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.